DOL-306
T·P-2

51st Year of Publication ★ SATYAVADI Daily, MYSORE 4

Reg No B G 155 ಶ್ರೀ 23-5-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ. 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

# ಸತ್ಯವಾದಿ

Space available

For Permanent Advertisement

ಸ್ಥಾಪಕರು : ಅರಮನೆ ಭರತ್ತೀವಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಜರೂಸೆಲಂ ಬಗ್ಗೆ ಇಸ್ರೇಲ್‌ಗೆ ರಕ್ಷಣಾ ಸಮಿತಿಯ ಆಜ್ಞೆ

ಮೈಸೂರು ಅಸೋಸಿಯೇಟೆಡ್ ಟಾಕೀಸ್ ಬೆಳ್ಳಿ ಹಾಕಿರುವ ತಮ್ಮ ಸ್ವಂತ ಭವ್ಯ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

## ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ ನಡೆಯುವ ಪೂತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

### "ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ಸೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆವಂತೆಯೇ ಇದು.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ಪೂರ್ವಕವಾಗಿ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

### ಗೋಮಾಂಸ ಭಕ್ಷಣೆ

ಬೆಂಗಳೂರು— ಭಾರತೀಯ ಆಹಾರ ಮಂತ್ರಿ ಶ್ರೀ ಗಜಜೀವನ ರಾಂರವರು 'ವೇದ ಕಾಲದಲ್ಲಿ ಗೋಮಾಂಸ ಭಕ್ಷಣೆ ಇತ್ತೆಂದು ಪ್ರಚೋದಿಸುವ ಬಗ್ಗೆ ಬಟ್ಟೆಗುಡ್ಡೆ ಹಿಂದು ಯುವಕ ಸಂಘವು ಪ್ರತಿಭಟಿಸಿದೆ.

★

### ಬೆಳಗಾಂ ಸಿಕ್ಕಲು ಉಪವಾಸ

ಬೊಂಬಾಯಿ— ಮಹಾರಾಷ್ಟ್ರ ಏಕೀಕರಣ ಸಮಿತಿಯು ಬೆಳಗಾಮಿ 7 ಮಂದಿ ಕಾರ್ಯಕರ್ತರು ಮಹಾರಾಷ್ಟ್ರ ಪ್ರಾದೇಶಿಕ ಕಾಂಗ್ರೆಸ್ಸು ಸಮಿತಿ ಕ್ಯಾಂಪ್ ಮುಂದೆ, ಕೂಡಲೇ ಮೈಸೂರು ಗಡಿ ಭಾಗಗಳಾದ ಬೆಳಗಾಂ,, ಕಾರವಾರ, ನಿಪ್ಪಾಣಿ, ಮತ್ತಿತರ ಸ್ಥಳಗಳು ಕೂಡಲೇ ಮಹಾರಾಷ್ಟ್ರಕ್ಕೆ ಸೇರ್ಪಡೆಯಾಗಬೇಕೆಂದು ಉಪವಾಸ ಕೈಗೊಂಡಿರುವರು.

★

### ಹೊಸ ಶಾಲೆಗಳು

ಬೆಂಗಳೂರು— 68-69 ರಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ 27 ಹೊಸ ಸ್ಕೂಲುಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿದೆ.

★

### ಎಸ್ಸೆಸ್ಸಿ ಜಳವಳ

ಮೈಸೂರು— ಎಸ್ಸೆಸ್ಸಿ ಜಳವಳದ 2 ನೇ ಹಂತದಲ್ಲಿ ಇಂದಿನಿಂದ 4 ದಿನಗಳು ನಗರದ ವಿವಿಧ ಮೊಹಲ್ಲಾಗಳಲ್ಲಿ ಬಹಿರಂಗ ಸಭೆ ನಡೆಸಿ ತಮ್ಮ 24 ಪಾಯಿಂಟು ಕೇಳಿಕೆಗಳನ್ನು ವಿವರಿಸಲಾಗುವುದು.

●

ನವದೆಹಲಿ— ಭಾರತದಲ್ಲಿ ತಯಾರಾಗುವ ಟಿಲಿವಿಜ್ಞ ಸೆಟ್ಟುಗಳು ಅಕ್ಟೋಬರಿನ ಹೊತ್ತಿಗೆ ಮಾರುಕಟ್ಟೆಗೆ ಬರುವ ನಿರೀಕ್ಷೆ ಇದೆ.

### ರಾಮಪ್ರಿಯ ಅರಮನೆ ಕೊಳ್ಳಿಲ್ಲ

ಬೆಂಗಳೂರು— ತಿರುವಾಂಕೂರು ಎಲ್ಲೈ ರಾಜರ ರಾಮಪ್ರಿಯ ಅರಮನೆಯನ್ನು ಕೊಳ್ಳುವ ವಿಷಯವನ್ನು, ಬೆಲೆ ಬಹಳ ಹೆಚ್ಚಾಗಿರುವದರಿಂದ, ಸರಕಾರ ತ್ಯಜಿಸಿದೆ ಎಂದು ವಾರ್ತಾ ಸಚಿವ ಶ್ರೀ ಮುಮದ್ದಾಲಿ ಹೇಳಿದರು.

●

### ನೀರಿನ ವ್ಯಾಜ್ಯ

ಬೆಂಗಳೂರು— ಮಹಾರಾಷ್ಟ್ರ ಮತ್ತು ಆಂಧ್ರ ಮುಖ್ಯ ಮಂತ್ರಿಗಳೊಡನೆ ಪರ್ಯಾಲೋಚಿಸಿದ ನಂತರ, ಕೃಷ್ಣಾ – ಗೋದಾವರಿ ನೀರಿನ ಹಂಚಿಕೆ ವಿಷಯವನ್ನು ಪಂಚಾಯಿತಿಗೆ ಹಾಕಬೇಕೆಂದು ಪ್ರಧಾನಿ ಇಂದಿರಾರವರಿಗೆ ತಾವು ಬರೆದಿರುವದಾಗಿ ಮುಖ್ಯ ಮಂತ್ರಿ ದಿಜಲಿಂಗಪ್ಪನವರು ಮಂತ್ರಿ ಮಂಡಲಕ್ಕೆ ನಿನ್ನೆ ತಿಳಿಸಿದರು.

★

### ಮಂತ್ರಿಗಳಿಗೆ ವಿದೇಶೀ ವಿನಿಮಯ

ನವದೆಹಲಿ— ಏನೋಸೋ ಕಾರಣಗಳಿಗಾಗಿ ವಿದೇಶೀ ಪ್ರವಾಸ ಕೈಗೊಳ್ಳಲಿದ್ದ ಮಂತ್ರಿಗಳಾದ ಶ್ರೀ ಅಶೋಕ ಮೇಥಾ, ಡಾ॥ ವಿ ಕೆ ಆರ್ ವಿ ರಾವ್, ಶ್ರೀ ಗುರುಪಾದ ಸ್ವಾಮಿ, ಶ್ರೀ ಜಗನ್ನಾಥರಿಗೆ ವಿದೇಶೀ ವಿನಿಮಯ ನೀಡಲು ಉಪ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯರು ತಿರಸ್ಕರಿಸಿ ಮಂತ್ರಿಗಳೂ ಅಧಿಕಾರಿಗಳೂ ಅತ್ಯಂತ ಅವಶ್ಯಕವಾದಾಗ ಮಾತ್ರ ವಿದೇಶೀ ಪ್ರವಾಸ ಕೈಗೊಳ್ಳಬೇಕೆಂದು ತಿಳಿಸಿದರು.

★

### ಪ್ರತಿಬಂಧ

ನವದೆಹಲಿ— ಜೀಣಾ ವಿರುದ್ಧದ ಅಮೆರಿಕಾ ಚಲಚ್ಚಿತ್ರವನ್ನು ಪಾಕಿಸ್ಥಾನ ಪ್ರತಿಬಂಧಿಸಿದೆ.

### ಇಸ್ರೇಲಿಗೆ ಆಜ್ಞೆ

ವಿಶ್ವಸಂಸ್ಥೆ— ಜರೂಸೆಲಮ್ಮಿನ ಅಂತರ್ರಾಷ್ಟ್ರೀಯ ಸ್ಥಾನಮಾನವನ್ನು ಬದಲಾಯಿಸಲು ಕೈಗೊಂಡಿರುವ ಮಾರ್ಗವನ್ನು ತ್ಯಜಿಸಬೇಕೆಂದು ಇಸ್ರೇಲಿಗೆ ರಕ್ಷಣಾ ಸಮಿತಿ ಆಜ್ಞೆ ಮಾಡಿದೆ.

●

### ಕುಟುಂಬ ಯೋಜನೆ ವಿರುದ್ಧ

ಹೈದರಾಬಾದು— ಜಗದ್ಗುರು ಕಂಚಿ ಕಾಮಕೋಟಿ ಪೀಠದ ಶಂಕರಾಚಾರ್ಯರು ದೇಶದಲ್ಲಿ ಕುಟುಂಬ ಯೋಜನೆಯನ್ನು ವಿರೋಧಿಸಿರುವರು – ಈ ಕಾರ್ಯಕ್ರಮದಿಂದ ಹಿಂದೂ ಜನಾಂಗವು ಬಹುಸಂಖ್ಯಾತೆಯಿಂದ ಅಲ್ಪಸಂಖ್ಯಾತರಾಗಿ ಇರುವದಕ್ಕಿಂತ, ಹೊಟ್ಟೆಗಿಲ್ಲದೇ ಸಾಯುವದಕ್ಕೇ ಹೆಚ್ಚು ಇಷ್ಟಪಡಬೇಕೆಂದು ತಿಳಿಸಿರುವರು.

### ಹೊಸ ಮುಖ್ಯಮಂತ್ರಿಗಳು

ಮೈಸೂರು ವಿಧಾನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ – ಮುಖ್ಯ ಮಂತ್ರಿಗಳಾಗಿ – ಶ್ರೀ ವಿರೇಂದ್ರ ಪಾಟೀಲರು ಸರ್ವಾನುಮತದಿಂದ ಚುನಾಯಿಸಲ್ಪಟ್ಟರು

### ವೈದ್ಯಕೀಯ ಸೌಕರ್ಯ

ಮೈಸೂರು— ಮೈಸೂರು ಜಲ್ಲೆಯಲ್ಲಿ ಒಟ್ಟು 19.22 ಲಕ್ಷ ಜನಸಂಖ್ಯೆಗೆ 110 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಮತ್ತು ಆಸ್ಪತ್ರೆಗಳೂ, ಜೊತೆಗೆ 3 ಹಿರಿಯ ಆಸ್ಪತ್ರೆಗಳೂ ಇರುವದಾಗಿ ಆರೋಗ್ಯ ವಾರ್ಷಿಕ ವರದಿ ತಿಳಿಸುತ್ತದೆ.

★

### ರಾಷ್ಟ್ರೀಕರಣ

ಆಲ್ಜೀರ್ಸ್— ಸರಕಾರವು 27 ಖಾಸಗಿ ಕಂಪೆನಿಗಳನ್ನು ರಾಷ್ಟ್ರೀಕರಣ ಮಾಡಿದೆ.

## ವಿವಾಹ ಮತ್ತು ಲೈಂಗಿಕ ಜೀವನ

ಪ್ರಾಗ್— ಜೆಕೊಸ್ಲೊವಾಕಿಯದ ಸಮಾಜಶಾಸ್ತ್ರ ಸಂಸ್ಥೆಯು ಪ್ರಾಗ್, ಬ್ರನೋ ಮತ್ತು ಕೊಸಿಟ್ಸೆ ನಗರಗಳಲ್ಲಿ 293 ದಂಪತಿಗಳ ಲೈಂಗಿಕ ಜೀವನದ ಕುರಿತು ಸಂಶೋಧನೆಯನ್ನು ನಡೆಸಿತು. ಎರಡು ವರ್ಷಗಳಿಂದ ವಿವಾಹಿತರಾಗಿರುವ ದಂಪತಿಗಳಲ್ಲಿ ಸೇಕಡ 25 ರಷ್ಟು ಮಂದಿ ಯುವಕರಿಗೂ, ಸೇಕಡ 50 ಮಂದಿ ಯುವತಿಯರಿಗೂ ಲೈಂಗಿಕ ವಿಷಯಗಳ ತಿಳಿವಳಿಕೆಯು ಸಾಲದೆಂದು ಕಂಡುಬಂದಿತು. ತಾಯಿ ತಂದೆಯರು ಈ ಬಗ್ಗೆ ತಿಳುವಳಿಕೆ ನೀಡರು. ಹುಡುಗಿಯರಿಗೆ ತಿಳಿಯುವಷ್ಟು ಹುಡುಗಿಯರಿಗೆ ತಿಳಿಯದು. ಅವರಲ್ಲಿ ಸೇಕಡ ಹತ್ತರಷ್ಟು ಜನರಿಗೆ ಸಾಲೆಗಳಲ್ಲಿ ಈ ವಿಷಯಗಳು ತಿಳಿದವು. ಹೆಚ್ಚು ಕಡಮೆ ಎಲ್ಲರಿಗೂ ಪುಸ್ತಕಗಳಿಂದಲೇ ವಿಷಯಗಳು ತಿಳಿದುವು. ತಮ್ಮ ಸಹಪಾಠಿಗಳಿಂದ ತಮಗೆ ಈ ಜ್ಞಾನವು ಉಂಟಾಯಿತೆಂದು ಸೇಕಡ 30 ರಷ್ಟು ನುಂದಿ ಯುವಜನರು ಒಪ್ಪಿಕೊಂಡರು. ಕೆಲವರ ಹೊರತು ಅಧಿಕಾಂಶದ ಯುವಕರಿಗೆ ಗರ್ಭನಿರೋಧಕ ಉಪಾಯಗಳ ಪರಿಚಯವಿದ್ದಿತು ಯುವತಿಯರಿಗೆ ಅವರ ವಿವಾಹಕ್ಕೆ ಮೊದಲು ಅವುಗಳ ಪರಿಚಯವಿರಲಿಲ್ಲ. ವಿವಾಹ ಸೌಖ್ಯಕ್ಕೆ ದಂಪತಿಗಳ ಪರಸ್ಪರ ಶ್ರದ್ಧೆ, ಪ್ರಾಮಾಣಿಕ ಲೈಂಗಿಕ ಸಾಹಚರ್ಯ ಆವಶ್ಯಕವೆಂದು ಹೆಚ್ಚು ಮಂದಿ ದಂಪತಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಅಪಡಲ್ಲಾ ಸ್ತ್ರೀಯರ ಸಂಖ್ಯೆ ಸ್ವಲ್ಪ ಹೆಚ್ಚು.

★

## ವಿವಾಹ ಮಹೋತ್ಸವ

ಚಿ॥ ಸೌ॥ ಎಂ. ಎಸ್. ಚಂದ್ರಕಾಂತ (ಕನ್ನೇಗೌಡನ ಕೊಪ್ಪಲಿನಲ್ಲಿರುವ ಡಾ॥ ಎಂ. ನರಸಿಂಹಯ್ಯ ಪಂಡಿತೋತ್ತಮರವರ ಪುತ್ರಿ) ಮತ್ತು ಚಿ॥ ರಾ॥ ನಾಗರಾಜ್ ಬಿ. ಎಸ್ಸಿ. (ಲೇಟ್ ಅಸಿಸ್ಟೆಂಟ್ ಸರ್ಜನ್ ಡಾ॥ ಎಸ್. ನರಸಿಂಹಯ್ಯನವರ ಪುತ್ರ) ಇವರ ವಿವಾಹಮಹೋತ್ಸವವು ಈ ದಿವಸ ವೈಭವವಾಗಿ ನೆರವೇರಿತು.


# ಗೋವಧೆಕೂಡಲೆನಿಷೇಧವಾಗಲಿ

## Cow Slaughter should be banned Immediately

# SHAKTI SUDHA

## A Superb Tonic

## Protect the Cow

ಗೋರಕ್ಷಣೆ ಮತ್ತು ಪಾಲನೆದಯಾ ಕಾರ್ಯಕರ್ತರು ಹೆಚ್ಚಿಚ್ಚಾಗಿ ನಡೆಯಲಿ
ಶ್ರೀದ್ವಾರಕಾ ಜಗದ್ಗುರು ಮಹಾಸನ್ನಿಧಿಗಳವರು ಶ್ರೀ ಶೃಂಗೇರಿ ಜಗದ್ಗುರು
ಮಹಾಸನ್ನಿಧಿಗಳವರ ಆಜ್ಞಾನುಸಾರ ಅಖಿಲ ಭಾರತ ವ್ಯಾಪ್ತಿಯಾಗಿದೆ
ಕನ್ನಡಿಗರಲ್ಲಿ ಗೋರಕ್ಷಣೆ, ಪಾಲನೆದಯೆ, ತಾಖಾಹಾರ, ಪಶುವೈದ್ಯ,
ವಿಚಾರಗಳ ವಿಶೇಷ ಪ್ರಚಾರ ಮೂಡಬೇಕಿದೆ. ವಾರ್ಷಿಕ ಚಂದಾ 50 ಪೈಸೆ

Quality Printing — Neat Binding

## Lakshminarasimha Press

Sivarampet, Mysore

# ವುಡ್‌ಲಾಂಡ್ಸ್ ಜನಪ್ರಿಯ 3ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ ....

# ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

# ಅಪೇರ— ಅಮೋಘ 2ನೇ ವಾರ

.... ಅಮೋಘ ಕನ್ನಡ ಚಿತ್ರ ....

# ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಟ್ಟಾರಕರ್
ಅಶ್ವಥ್ ಜಯಂತಿ ವಿಜಯಲಲಿತ

# Help The Gorakshana

ಗೋರಕ್ಷಣಾಕ್ಕೆ ಬೆಂಬಲ ನೀಡಿ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಾಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಹಂದಾವಾಯಿದೆ ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ॥ ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಿ ಧರ್ಮಪ್ರಚಾರಸಭಾ, ಹೊಂಗನೂರ
ಗೋರಕ್ಷಣಾ ಆಫೀಸು, ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4
ವಿಳಾಸ— ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು


## Golden Jubilee of 'Satyavadi'

The golden-jubilee of the 'Satyavadi' is to be celebrated very soon.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty coopération, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao ( Proprietor ) at the Satyavadi Press Chamarajapuram, Mysoe 4